**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.</u>**

**<u>ಸಿ.ಸಿ.ನಂ.708/2020</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ವೆಂಕಟೇಶಪ್ಪ ಕೆ ಎಸ್** | | |
| **ಗಂಡಃತಂದೆಃಹೆಸರು** | **ಸಿದ್ದಪ್ಪ** | **ಪಿಡಬ್ಲೂಃ** | 2 |
| **ವಯಸ್ಸು** | 37 **ವರ್ಷ** | **ಸಿಡಬ್ಲೂಃ** | 1 |
| **ಉದ್ಯೋಗಃ** | **ಅಬಕಾರಿ ಪೇದೆ** | | |
| **ವಾಸ ಸ್ಥಳಃ** | **ಎನ್ ಕೊತ್ತೂರು ಗ್ರಾಮ** | | |

**<u>ದಿನಾಂಕ 05-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ-</u>**

ದಿ. 26.03.2020 ರಂದು ಚಿಂತಾಮಣಿ ವಲಯದ ಅಬಕಾರಿ ಉಪ ನಿರೀಕ್ಷಕರು ಮತ್ತು ಸಿಬಂದಿ ಗಳಾದ ನಾವು ಚಿಂತಾಮಣಿ ನಗರಾದ್ಯಂತ ಕೊರೋನಾ ವೈರಸ್ ತಡೆಗಟ್ಟುವ ಮುಂಜಾಗ್ರತಾ ಕ್ರಮವನ್ನು ಕೇಂದ್ರ ಸರ್ಕಾರದ ಸೂಚನೆಯಂತೆ ದೇಶಾದ್ಯಂತ ಜನತಾ ಕರ್ಪೂ ಮತ್ತು ಲಾಕ್ ಡೌನ್ ಚಾಲ್ತಿಯಲ್ಲಿದು, ಈ ಸಂದರ್ಭದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, ಕಲಂ 144 ಜಾರಿಯಲ್ಲಿರುತ್ತದೆ. ಈ ಸಂಬಂದ ಚಿಂತಾಮಣಿ ತಾಲೂಕಿನಲ್ಲಿರುವ ಎಲ್ಲಾ ಅಬಕಾರಿ ಅಂಗಡಿಗಳು ಮುಚ್ಚಲ್ಪಟ್ಟಿರುತ್ತವೆ. ಈ ಸಂಬಂಧ ಅಬಕಾರಿ ಜಾರಿ ಮತ್ತು ತನಿಖಾ ಕಾರ್ಯಗಳನ್ನು ಸಕ್ರಿಯವಾಗಿ ನಿರ್ವಹಿಸಲು ಈ ದಿನ ರಾತ್ರಿ 09.05 ನಿಮಿಷಕ್ಕೆ ಇಲಾಖಾ ವಾಹನವಾದ ಕೆಎ 40 ಜಿ 0546 ವಾಹದಲ್ಲಿ ಚಿಂತಾಮಣಿ ನಗರದ ಕನಂಪಲ್ಲಿ ಬೆಂಗಳೂರು ಮುಖ್ಯ ರಸ್ತೆಯ ಹಾಲಿನ ಡೈರಿ ಮುಂಭಾಗದಲ್ಲಿ ಗಸ್ತು ನಿರ್ವಹಿಸುತ್ತಿದ್ದಾಗ ಮತ್ತು ರಸ್ತೆಯಲ್ಲಿ ಬರುವ ವಾಹನಗಳನ್ನು ತಪಾಸಣೆ ಮಾಡಬೇಕಾದರೆ ಹಾಲಿನ ಡೈರಿ ಮುಂಭಾಗದಲ್ಲಿ ನೀಲಗಿರಿ ತೋಟದ ಕಾಲುದಾರಿಯಿ ಇಬ್ಬರು ಆಸಾಮಿಗಳು ಒಂದು ದ್ವಿಚಕ್ರ ವಾಹದ್ಲಿ ಪ್ಲಾಸಿಕ್ ಚೀಲ ಇಟ್ಟುಕೊಂಡು ಹೋಗುವುದು ಗಮನಿಸಿ ಕೂಡಲೇ ಇಲಾಖಾ ವಾಹದಲ್ಲಿ ಅವರನು ಹಿಂಬಾಲಿಸಿಕೊಂಡು ಹೋಗಲಾಗಿ ನಮ್ಮನ್ನು ಕಂಡು ನೀಲಗಿರಿ ತೋಪಿನ ಕಾಲುದಾರಿಯಲ್ಲಿ ದ್ವಿಚಕ್ರ ವಾಹನವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಲಾಗಿ,

ಕೂಡಲೇ ನಾವು ವಾಹನದಿಂದ ಇಳಿದು ಅವರನ್ನು ಹಿಂಬಾಲಿಸಲಾಗಿ ಕತ್ತಲಿನಲ್ಲಿ ಕಣ್ಮರೆಯಾಗಿರುತ್ತಾರೆ . ನಂತರ ಆ ವಾಹನವನ್ನು ಶೋದನೆ ಮಾಡಲು ಪಂಚರ ಅವಶ್ಯಕತೆ ಇದ್ದು ಸ್ಥಳೀಯರನ್ನು ನೋಡಲಾಗಿ ಯಾರೂ ಕಂಡು ಬಂದಿರುವುದಿಲ್ಲ. ನಂತರ ಇಲಾಖಾ ಸಿಬ್ಬಂದಿಯನ್ನು ಪಂಚರನ್ನಾಗಿ ಇರಿಸಿಕೊಂಡು ಘನ ನ್ಯಾಯಾಲಯದಿಂದ ಶೋದನಾ ವಾರೆಂಟ್ ಪಡೆಯಲು ಸಾಕಷ್ಟು ಸಮಯ ಇಲ್ಲದ ಕಾರಣ 1965 ರ ಅಬಕಾರಿ ಕಾಯಿದೆ 54 ರ ಕಲಂ ನಂತೆ ಪದತ್ತವಾದ ಅಧಿಕಾರವನ್ನು ಚಲಾಯಿಸಿಕೊಂಡು ಸ್ಥಳದಲ್ಲಿಯೇ ಶೋದನಾ ವಾರೆಂಟ್ ಅನ್ನು ತಯಾರಿಸಿಕೊಂಡೆವು. ದ್ವಿಚಕ್ರ ವಾಹನವನ್ನು ಮತ್ತು ಚೀಲವನ್ನು ಪರಿಶೀಲಿಸಲಾಗಿ ಪ್ಲಾಸ್ಟಿಕ್ ಚೀಲದಲ್ಲಿ ಒಂದು ಮದ್ಯದ ಬಾಕ್ಸ್ ಕಂಡು ಬಂದು, ಅದನ್ನು ಬಿಚ್ಚಿ ನೋಡಲಾಗಿ 90 ಎಂಎಲ್ ನ 96 ಹೈ ವಾರ್ಡ್ ಚಿಯಾರ್ಸ್ ಟೆಟ್ರಾ ಪ್ಯಾಕೆಟ್ಗಳು ಇರುವುದು ಕಂಡುಬರುತ್ತದೆ. ದ್ವಿಚಕ್ರವಾಹನವನ್ನು ಪರಿಶೀಲಿಸಲಾಗಿ ಬಿಳಿ ಬಣ್ಣದಿಂದ ಕೂಡಿದ ಹೋಂಡಾ ಆಕ್ಟಿವಾ ಕೆ ಎ 07 ಡಬ್ಲ್ಯೂ 9436 ಆಗಿರುತ್ತದೆ. ನಂತರ ಓಡಿ ಹೋದ ಆಸಾಮಿಗಳ ಬಗ್ಗೆ ಸ್ಥಳಿಯರನ್ನು ವಿಚಾರಿಸಲಾಗಿ ನಮಗೆ ತಿಳಿದಿಲ್ಲ ಎಂದು ಹೇಳಿರುತ್ತಾರೆ . ಆ ನಂತರ ದೊರೆತ ಮದ್ಯದಲ್ಲಿ ಸ್ಥಳದಲ್ಲಿ 90 ಮಿಲಿಯ 6 ಟೆಟ್ರಾ ಪ್ಯಾಕೆಟ್ ಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಸೀಲು ಮಾಡಿದರು.

ಮಾದರಿ ಚೀಟಿಗಳ ಮೇಲೆ ಸಹಿಯನು ಮಾಡಿ ಅಂಟಟಿಸಲಾಯಿತು. ನಂತರ ಅವುಗಳನ್ನು ರಾತ್ರಿ 09.05–10.15 ಅಮಾನತ್ತು ಪಡಿಸಿಕೊಂಡು ಹಾಗೂ ಆರೋಪಿಯನ್ನು ವಶಕ್ಕೆ ಪಡೆದೆವು.

ಸಾಕ್ಷಿಗೆ ನಿಪಿ 1 ಅನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಮಾಲನು ತೋರಿಸಲಾಗಿ ಸಾಕ್ಷಿಯು 6 ಟೆಟ್ರಾ ಪ್ಯಾಕೆಟ್ಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಮು.ಮಾ. 1 ರಿಂದ 6 ಎಂದು ಗುರುತಿಸಲಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಶ್ರೀ.ಎಂ.ವಿ.ಎಂ.ಆರೋಪಿ ಪರ ವಕೀಲರಿಂದಃ–**

ಗಸ್ತು ಕರ್ತವ್ಯ ಮಾಡಲು ನಮ್ಮ ಮೇಲಾಧಿಕಾರಿಗಳು ಆದೇಶ ಮಾಡಿದ್ದರಾ ಎಂದರೆ ಹೌದು. ಆದೇಶ ವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ ಮೌಖಿಕವಾಗಿ ಆದೇಶ ಬಂದಿತ್ತು. ಆ ದಿನ ಗಸ್ತು ಕಾರ್ಯ ಮಾಡುವಾಗ ಮೊದಲು ಎಲ್ಲಿ ಎಲ್ಲಿ ಮಾಡಿದ್ದೀರಿ ಎಂದರೆ ಮೊದಲು ಚೇಳೂರು ವೃತ್ತ ನಂತರ ಬಾಗೇಪಲ್ಲಿ ವೃತ್ತ ನಂತರ ಕನಂಪಲ್ಲಿಗೆ ಹೋಗಿದ್ದೆವು. ಆ ದಿನ ಎಷ್ಟ ಗಂಟೆಗೆ ನಿಮ್ಮ ಕಛೇರಿ ಬಿಟ್ಟಿರಿ ಎಂದರೆ ಸಂಜೆ 07.00 ಗಂಟೆಗೆ ಬಿಟ್ಟಿದ್ದೆ. ನಾನು ಹೇಳಿದ

ಘಟಣಾ ಸ್ಥಳ ಬೆಂಗಳೂರು ಮುಖ್ಯ ರಸ್ತೆ ಪಕ್ಕದಲ್ಲಿ ಇದೆ ಎಂದರೆ ಹೌದು. ಅಲ್ಲಿ ಸಾಮಾನ್ಯವಾಗಿ ಸಾರ್ವಜನಿಕರು ಓಡಾಡುತ್ತಾರೆ ಎಂದರೆ ಹೌದು ಆದರೆ ಲಾಕ್ ಡೌನ್ ಇರುವುದರಿಂದ ಯಾರೂ ಇರಲಿಲ್ಲ. ಆರೋಪಿಯನ್ನು ಎಷ್ಟು ದೂರದಿಂದ ನೋಡಿದ್ದೀರಿ ಎಂದರೆ 50 ಮೀಟರ್ ಅಂತರದಲ್ಲಿ ನೋಡಿದ್ದೆ. ಆರೋಪಿ ಯಾವ ರೀತಿ ಇದ್ದರು ಮತ್ತು ಬಟ್ಟೆ ಯಾವುದು ಹೇಳಲು ಆಗುತ್ತದಾ ಎಂದರೆ ರಾತ್ರಿ 09.00 ಗಂಟೆ ಆಗಿದ್ದರಿಂದ ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ. ಶೋದನೆ ಮಾಡುವ ಮೊದಲು ಅಂಗ ಶೋದನೆ ಮಾಡಿಕೊಂಡರಾ ಎಂದರೆ ಹೌದು.

ಪ್ರತಿಯೊಂದು ಪ್ಯಾಕೆಟ್ ನಿಂದ ಮಾದರಿಯನು ತೆಗೆದುಕೊಳ್ಳಬೇಕು ಎಂದರೆ ಇಂತಿಷ್ಟು ಪ್ರಮಾಣ ಅಂದರೆ 2.3 ಲೀಟರ್ ಅಷ್ಟು ಕಳಿಸಬಹುದು. ನಿಪಿ 1 ಕ್ಕೆ ಎಷ್ಟು ಜನ ಸಹಿ ಹಾಕಿದರು ಎಂದರೆ 5 ಜನ ಹಾಕಿದರು. ಸದರಿಯವರು ನಿಮ್ಮ ಸಂಬಂದಿಯವರಾ ಎಂದರೆ ಹೌದು.

ಮು.ಮಾ. 1 ರಿಂದ 5 ಕ್ಕೆ ಮಹಜರ್ ಸಾಕ್ಷಿಗಳ ಎಲ್ಲರ ಸಹಿ ಮಾಡಿರಬೇಕು ಎಂದರೆ ಮಾಡಿದ್ದೇವೆ. ಮು.ಮಾ 1 ರಿಂದ 5 ಕ್ಕೆ ಸಹಿ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಮದ್ಯ ಸಾಗಾಣಿಕೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನೀವು ಗಸ್ತು ಮಾಡಲಿಲ್ಲ, ಸ್ಥಳಕ್ಕೂ ಹೋಗಲಿಲ್ಲ ಆರೋಪಿ ನಿಮ್ಮನ್ನು ನೋಡಿ ಓಡಿ ಹೋಗಲಿಲ, ಯಾವುದೇ ಪಂಚನಾಮೆ ಮಾಡ್ಲಿ, ಮಾಲನ್ನು ಅಮಾನತು ಪಡಿಸಿಕೊಂಡಿಲ್ಲ, ನಮ್ಮ ಅಂಕಿ ಅಂಶಗಳಿಗೋಸ್ಕರ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಕೋರೋನ ಇದ್ದ ಕಾರಣ ಅಂಗಡಿ , ಮದ್ಯದ ಅಂಗಡಿಗಳು ತೆಗೆದಿರಲಿಲ್ಲ ಆ ರೀತಿ ಅಕ್ರಮ ಮದ್ಯ ಸಾಗಾಣಿಕೆ ಮಾಡುವ ಅವಶ್ಯಕತೆ ಬರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.